ಶ್ರೀ ಕೆ. ಲಕ್ಕಪ್ಪ.—ಸಹಕಾರ ಕ್ಷೇತ್ರದಲ್ಲಿ ಹಣ ದುರುಪಯೋಗವಾಗತಕ್ಕ ವಿಷಯಗಳು ಈ ದೇಶದಲ್ಲಿ ಸರ್ವೇಸಾಮಾನ್ಯವಾಗಿದೆ. ಆದ್ದರಿಂದ ದೇಶದಲ್ಲಿರುವ ಸಹಕಾರ ಸಂಘಗಳಲ್ಲಿ ಎಲ್ಲಿ ಹಣ ದುರುಪಯೋಗವಾಗಿದೆ ಅಂತಹ ಕಡೆಗಳಲ್ಲೆಲ್ಲಾ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಅವಕಾಶ ವನ್ನು ಕಲ್ಪಿಸಿ ಕೊಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದು ಈ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಹಣ ದುರುಪ ಯೋಗವಾಗಿ ಎಂಟು ವರ್ಷಗಳಾದರೂ ಶಿರಹಟ್ಟಿಯೆಲ್ಲರುವ ಸರ್ಕಾರ ಸಂಘದ ಕಾರ್ಯದರ್ಶಿಗಳ ಮೇಲೆ ಏನೂ ಕ್ರಮ ತೆಗೆದುಕೊಳ್ಳದೇ ಇರಲು ಇವರು ಶಿರಹಟ್ಟಿ ಕಾಂಗ್ರೆಸ್ಸಿನಲ್ಲಿರುವ ಕಮಿಟಿ ಚೇರ್ಮನ್ನರಾಗಿರುವುದರಿಂದ ಅಲ್ಲವೇ ? (ನಗು)

[ಉತ್ತರವಿಲ್ಲ.]

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಲ್ಲಿ ಪೊಸ್ ಅಪ್ರೊಪ್ರಿಯೇಷನ್ನಿನ ಜೊತಗೆ ಇನ್‌ನರ್ಷನ್ ಕೂಡ ಆಗಿದೆ ಎಂದು ಹೇಳುತ್ತೀರಿ. ಹಾಗಾದರೆ ಇಲ್ಲಿ ಎರಡು ಅಪಾದನೆಗಳು ಆದವು. ಹಾಗಿದ್ದರೂ ಇವರನ್ನು ಇನ್ನೂ ಕಾರ್ಯದರ್ಶಿಗಳಾಗಿ ಮುಂದುವರಿಸುತ್ತಿದ್ದೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರು ಕಾರ್ಯದರ್ಶಿಗಳಾಗಿ ಮುಂದುವರಿಯುತ್ತಿಲ್ಲ.

Damage caused to the Lands due to the Breach of Feeder Channel leading to Tumkur-Amanikere Tank at Swandenahalli Village in Tumkur Taluk.

*Q.—699. Sri G. C. BHAGEERATHAMMA (Tumkur).—

Will the Government be pleased to state :—

(*a*) whether it has come their notice that damage has been caused to hundreds of acres of land due to the breach of feeder channel leading to Tumkur-Amanikere Tank at Swandenahalli Village, Kasaba Hobli, Tumkur Taluk ;

(*b*) if so, the steps they have taken in this behalf ?

*A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) An estimate for providing flood control work on this halla near Swandenahalli has been got up and work will be taken up after sanction.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ನಾಲೆ ಒಡೆದು ಹೋಗಿರುವುದು ಸರಕಾರದ ಗಮನಕ್ಕೆ ಬಂದು ಎಷ್ಟು ದಿನಗಳಾದವು ?

† ಶ್ರೀ ಆಲೂರು ಹನುಮಂತಪ್ಪ.—ಸರಕಾರದ ಗಮನಕ್ಕೆ ಬಂದು ಇದರ ಬಗ್ಗೆ ಅಂದಾಜು ಕೂಡ ಆಗಿದೆ. 1962ನೇ ಇಸವಿಯಲ್ಲಿ ಸೆಪ್ಟಂಬರು ಹಾಗೂ ಅಕ್ಟೋಬರು ತಿಂಗಳುಗಳಲ್ಲಿ ಹೆಚ್ಚಿನ ಮಳೆ ಬಂದುದರಿಂದ ಇಲ್ಲಿ ಸ್ವಲ್ಪ ಡ್ಯಾಮೇಜು ಆಗಿದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಸ್ವಲ್ಪ ಸಿಲ್ಟನ್ನು ತೆಗೆಯಬೇಕೆಂದು ಇತ್ತು. ಇದರ ಬಗ್ಗೆ ಅಂದಾಜು ಆಗಿ ಈಚೆಗೆ ಮಂಜೂರಾಗಿದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಮಂಜೂರಾಗಿ ಎಷ್ಟು ವರ್ಷಗಳಾದವು ?

ಶ್ರೀ ಆಲೂರು ಹನುಮಂತಪ್ಪ.—ಹೋದ ತಿಂಗಳು ಇದು ಮಂಜೂರಾಗಿದೆ.

ಶ್ರೀ ಟಿ. ಮಾದಯ್ಯ ಗೌಡ.—1962ನೇ ಇಸವಿಯಲ್ಲೇ ನಾಲಾ ಒಡೆದು ಹೋಗಿರುವುದಕ್ಕೆ ಅಂದಾಜು ಮಾಡಿರುವುದನ್ನು ಮಂಜೂರು ಮಾಡಲು ಇಷ್ಟು ತಡವೇಕಾಯಿತು ?

ಶ್ರೀ ಆಲೂರು ಹನುಮಂತಪ್ಪ.—ನಾಲಾ ಒಡೆದಿಲ್ಲ. ಇಲ್ಲಿರುವ ಫೀಡರು ಚ್ಯಾನಲ್ಲು ತುಮಕೂರು ಅಮಾನಿ ಕೆರೆಯಲ್ಲಿದ್ದ ಪಕ್ಕದ ಹಳ್ಳವನ್ನು ಮುಚ್ಚಿ ಅಕ್ಕಪಕ್ಕದ ಜಮೀನಿನವರಿಗೆ ಪ್ರೊಟೆಕ್ಟೀವ್ ವರ್ಕ್ಸ್‌ಗಳನ್ನು ಮಾಡಬೇಕಾಗಿದೆ ಅಷ್ಟೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಇಲ್ಲಿನ ರೈತರು ಕಾಲು ಭಾಗದಷ್ಟು ಹಣವನ್ನು ಮೊದಲೇ ಕೊಡುತ್ತೇವೆಂದು ಮನವಿಗಳನ್ನು ಕೊಟ್ಟಿದ್ದರೂ ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಅಂತಹ ನಿಧಾನವೇನಾಗಿಲ್ಲ. ಇದರ ಅಂದಾಜು ಮಂಜೂರಾಗಿದೆ. ಬೇಗನೆ ಕೆಲಸಗಳೂ ಆಗುತ್ತವೆ. ಹೋದ ವರ್ಷ ಆಗಲಿಲ್ಲ. ಗ್ರಾಂಟು ಸಿಕ್ಕಿರಲಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ಬರಬಹುದು. ಕೆಲಸಗಳೂ ಆಗುತ್ತವೆ.

Scheme of supplying Water through Pipes to the Villages of Hulsur-Nittur and Ghat Borol in Bhalki Taluk.

*Q.—638. Sri S. RAJAGOPAL (K. G. F.) [on behalf of SRI BAPU RAO HULSURKAR (Hulsur)].—

Will the Government be pleased to state :—

(*a*) the stage at which the scheme for supplying water through pipes to the villages of Hulsur-Nittur and Ghat Borol in Bhalki Taluk, Bidar District, stand at present ;

(*b*) whether they have reduced the share of contribution of Village Panchayat in view of the recent policy of Government of India ;

(*c*) the stage of execution of the above work ?

A.—Sri RAMAKRISHNA HEGDE (Minister for Development, Panchayati Raj and Co-operation).—

(*a*) Still under investigation.

(*b*) No.

(*c*) Does not arise in view of reply to clause (*a*)

† Sri RAMAKRISHNA HEGDE.—Answers are as printed. But I would like to give certain further information regarding the stage at which these investigations are pending. (1) Hulsur—A rough estimate for Rs. 1,30,000 has been prepared and the concerned Village Panchayat has agreed to bear 25 per cent of the cost. The financial position of the Village Panchayat is reported to be sound. Therefore, there would not be any difficulty for taking further action. (2) Nittur-A rough estimate for Rs. 80,000 has been prepared. Further information has been called for regarding the financial soundness of the concerned Village Panchayat and also whether they are willing to contribute 25 per cent of the cost. (3) Regarding Ghat Borol in Bhalki Taluk, a rough estimate for Rs. 1,11,000 has been prepared. But information regarding the financial soundness of the panchayat and its willingness to contribute 25 per cent is being awaited.

Sri J. P. SARWESH.—May I know the number of villages in Bidar District where the water supply scheme is completed ?